ವಿಠಲ, ವಿಠಲ, ಪಾಂಡುರಂಗ, ಪಾಂಡುರಂಗ ವಿಠಲ ವಿಠಲ ಧ್ವನಿ ಕೇಳತೊಡಗಿದರೆ ಆಷಾಢ ಮಾಸ ಬಂತೆಂದೇ ಅರ್ಥ.

ವಿಜಯಪುರ, ಬೆಳಗಾವಿ, ಬಾಗಲಕೋಟೆ, ಬೀದರ್ ಜಿಲ್ಲೆಗಳಿಂದ ಧಿಂಡಿಗೆ, ಆಷಾಢಿಗೆ ಆಷಾಢ ಏಕಾದಶಿಗೆ ಹೆಜ್ಜೆಹಾಕುವವರು ಸಹಸ್ರಾರು ಜನ. ಆಷಾಢ ಏಕಾದಶಿಗೆ ದಶಲಕ್ಷ ಜನ ಸೇರುವ ತಾಣವೆಂದರೆ ಅದು ಸೊಲ್ಲಾಪುರ ಜಿಲ್ಲೆಯ ಪಂಢರಪುರ.

ಮಾಝೋ ಮಾಹೇರ ಪಂಢರಿ, ಭಜನೆ ಬೆಳಗಾನೆದ್ದು ಕೇಳಲಾರಂಭಿಸಿದರೆ ಆಷಾಢ ಮಾಸ ಬಂತೆಂದೇ ಅರ್ಥ.

ಪವಿತ್ರ ಭೀಮಾ ನದಿಯ ತಟದಲ್ಲಿರುವ ಪ್ರಾಚೀನ ತೀರ್ಥಕ್ಷೇತ್ರವಾದ ಪಂಢರಪುರವನ್ನು 'ಭೂವೈಕುಂಠ' ಎಂದು ಭಕ್ತಿಯಿಂದ ಕರೆಯಲಾಗುತ್ತದೆ.

ಭಕ್ತಿ ಸಂಪ್ರದಾಯದ ಆದ್ಯಪೀಠ ಎನಿಸಿರುವ ಪಂಢರಪುರವು ಮಹಾರಾಷ್ಟ್ರದ ಏಕದೇವತಾವಾದಿ ವಾರಕಾರಿ ಪಂಥ ಮತ್ತು ಕರ್ನಾಟಕದ ಹರಿದಾಸ ಪಂಥಗಳ ಕೇಂದ್ರಬಿಂದುವಾಗಿದೆ.

ವಿಠ್ಠಲರುಕ್ಮಿಣಿ ಮಂದಿರವು ಭಕ್ತಿ, ಇತಿಹಾಸ ಮತ್ತು ಸಂಸ್ಕೃತಿಯ ಕೇಂದ್ರಬಿಂದುವಾಗಿದ್ದು, ಭಾರತದಾದ್ಯಂತದ ಯಾತ್ರಿಕರನ್ನು ಆಕರ್ಷಿಸುತ್ತದೆ. ಅದರಲ್ಲೂ ಪ್ರತಿವರ್ಷ ಆಷಾಢ ಏಕಾದಶಿ ಮತ್ತು ಕಾರ್ತೀಕ ಏಕಾದಶಿಗಳಂದು ಸಹಸ್ರಾರು ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಶ್ರೀಮಂತ ಸಂಪ್ರದಾಯ, ಮೋಡಿಮಾಡುವ ವಾಸ್ತುಶಿಲ್ಪ ಮತ್ತು ಪ್ರಸಿದ್ಧ ಪಂಢರಪುರ ವಾರಿ ತೀರ್ಥಯಾತ್ರೆಯೊಂದಿಗೆ ಈ ದೇವಾಲಯವು ಕೇವಲ ಪೂಜಾ ಸ್ಥಳವಲ್ಲ, ಬದಲಾಗಿ ವಿಠಲನೊಂದಿಗಿನ ಅವಿನಾಭಾವ ನಂಬಿಕೆಯ ಸಂಕೇತವಾಗಿದೆ.

ಜಾತಿ, ಮತ ಬೇದವಿಲ್ಲದೇ ಭಕ್ತಜನ ಇಲ್ಲಿ ಸೇರುತ್ತಾರೆ. ಮರಾಠಿ, ಕನ್ನಡ, ತೆಲುಗು ಸೇರಿದಂತೆ ಹಲವು ಭಾಷೆಗಳ ಭಕ್ತರ ಸಂಗಮ, ಸಮನ್ವಯ ಕ್ಷೇತ್ರವಾಗಿ ಪಂಢರಪುರ ರಾರಾಜಿಸುತ್ತಿದೆ.

ದಕ್ಷಿಣ ಭಾರತದಲ್ಲೇ ಅತ್ಯಂತ ಪ್ರಸಿದ್ಧವಾದ ಈ ದೇವಾಲಯದಲ್ಲಿ ಇಟ್ಟಿಗೆ ಮೇಲೆ ಟೊಂಕಕ್ಕೆ ಕೈಇಟ್ಟು ನಿಂತಿರುವ ವಿಠಲ ಮತ್ತು ರುಕ್ಮಿಣಿಯರ ಆಕರ್ಷಕ ಮೂರ್ತಿಗಳು ಭಕ್ತರ ಕಣ್ಮನ ಸೆಳೆಯುತ್ತವೆ.

ಮಹಾರಾಷ್ಟ್ರ ಸೇರಿದಂತೆ ನಮ್ಮ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ವಿವಿಧೆಡೆಯಿಂದ ಲಕ್ಷಾಂತರ ಭಕ್ತರು ಪಂಢರಪುರಕ್ಕೆ ವಾರಾನುಗಟ್ಟಲೇ ಮೊದಲೇ ಮಳೆ, ಬಿಸಿಲು, ಚಳಿಯನ್ನು ಲೆಕ್ಕಿಸದೇ





### ಕನ್ನಡ ವಿಠಲನೆಂದೇ ಪ್ರಸಿದ್ಧ

ಪಂಢರಪುರದಲ್ಲಿ ಇರುವ ವಿಠಲನನ್ನು ಕಾನಡ (ಕನ್ನಡ) ವಿಠಲ ಎಂದೂ ಸ್ಥಳೀಯ ಮರಾಠಿಗರು ಕರೆಯುತ್ತಾರೆ. ಅಂದರೆ, ಈ ವಿಠಲ ಮೂರ್ತಿ ಮೂಲತಃ ಕರ್ನಾಟಕದ ಹಂಪಿಯಲ್ಲಿತ್ತು, ಬಳಿಕ ಇಲ್ಲಿಂದ ಪಂಢರಪುರಕ್ಕೆ ಕೊಂಡೊಯ್ದು ಪ್ರತಿಷ್ಠಾಪಿಸಲಾಯಿತು. ಕರ್ನಾಟಕದಿಂದ ವಿಠಲನ ಮೂರ್ತಿ ಕೊಂಡೊಯ್ದಿರುವುದರಿಂದ ಮರಾಠಿಗರು ಇದನ್ನು 'ಕಾನಡ ವಿಠಲ ಅಥವಾ ಕನ್ನಡ ವಿಠಲ' ಎಂದು ಕರೆಯುವುದು ರೂಢಿಯಲ್ಲಿದೆ.

### ನಮ್ಮ ವಿಠಲ, ಅವರ ವಿಠೋಬಾ

ಪಾಂಡುರಂಗ ವಿಠಲ ಕನ್ನಡಿಗ ದೇವರು. ಮಹಾರಾಷ್ಟ್ರದಲ್ಲಿ ಪ್ರೀತಿಯಿಂದ ವಿಠೋಬಾ ಎಂದು ಕರೆಯುತ್ತಾರೆ. ವಿಠೋಬಾ ಫಿರ್ ವಿಠೋಬಾ ಎಂದು ಲಾಲಿಸುತ್ತಾರೆ. ಭಜಿಸುತ್ತಾರೆ. ಮತ್ತತ್ತೆ ವಿಠಲ ಎಂದು ಕರೆಯುವ ಬಗೆ ಇದು.